# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ, ರಾಷ್ಟ್ರೀಯ ಹೆದ್ದಾರಿ-4, ಶಿಗ್ಗಾವಿ ತಾ, ಹಾವೇರಿ ಜಿ – 581 205


ಕುಲಸಚಿವರು (ಮೌ) ಕಜಾವಿವಿ/ಮೌವಿ/ಕ್ರಮಾಂಕ:2026-27 ದಿನಾಂಕ:01.07.2026

## ಸುತ್ತೋಲೆ

ವಿಷಯ : 2025-26ನೇ ಸಾಲಿನ ಪಿಎಚ್.ಡಿ ಪ್ರವೇಶ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಸೂಚನೆ ನೀಡುವ ಕುರಿತು.

ಉಲ್ಲೇಖ: 1. ಕಜಾವಿವಿ 2025-26 ನೇ ಸಾಲಿನ ಪಿಎಚ್.ಡಿ ಅಧಿಸೂಚನೆ ದಿನಾಂಕ: 16.12.2025
2. ಕಜಾವಿವಿಯ ಆಯಾ ವಿಭಾಗಗಳ ಡಾಕ್ಟರಲ್ ಸಮಿತಿ ನಡಾವಳಿಗಳ ಅನ್ವಯ ದಿನಾಂಕ: 06.05.2026
3. ಕಜಾವಿವಿ 2025-26ನೇ ಸಾಲಿನ ಪಿಎಚ್.ಡಿ ಪ್ರವೇಶಾತಿ ಸಿಂಡಿಕೇಟ್ ಉಪಸಮಿತಿಯ ನಡಾವಳಿ ದಿನಾಂಕ: 08.06.2026
4. ಕಜಾವಿವಿ ಸಿಂಡಿಕೇಟ್ ನಡಾವಳಿ ಕ್ರಮಸಂಖ್ಯೆ:02, ದಿನಾಂಕ: 11.06.2026
5. ಮಾನ್ಯ ಕುಲಪತಿಗಳ ಟಿಪ್ಪಣಿ ಸಂಖ್ಯೆ: 185, ದಿನಾಂಕ: 25.06.2026
6. ಕುಲಸಚಿವರು ಆಡಳಿತ ಪತ್ರ ದಿನಾಂಕ: 25.06.2026
7. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 27.06.2026

ಈ ಮೇಲ್ಕಂಡ ವಿಷಯ ಹಾಗೂ ಎಲ್ಲಾ ಉಲ್ಲೇಖಿಗಳನ್ವಯ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ 2025-26ನೇ ಸಾಲಿನ ಪಿಎಚ್.ಡಿ ಪ್ರವೇಶ ಪರೀಕ್ಷೆ ದಿನಾಂಕ: 13.07.2026 ರಂದು **ಬೆಳಿಗ್ಗೆ 11:30 ರಿಂದ ಮಧ್ಯಾಹ್ನ 01:30 ಗಂಟೆವರೆಗೆ ವಿಶ್ವವಿದ್ಯಾಲಯದ ಶೈಕ್ಷಣಿಕ ಭವನ, ಗೊಟಗೋಡಿಯಲ್ಲಿ** ನಿಗದಿಪಡಿಸಲಾಗಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ. ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ, ಪ್ರವೇಶ ಪತ್ರವನ್ನು ತಮ್ಮ ವಿಳಾಸಗಳಿಗೆ ನೊಂದಾಯಿತ ಅಂಚೆ ಮೂಲಕ ಕಳುಹಿಸಲಾಗಿದೆ. ಆದಾಗ್ಯೂ, ತಾಂತ್ರಿಕ ಕಾರಣಗಳಿಂದ ಪ್ರವೇಶಾತಿ ಪತ್ರ ತಲುಪದ ವಿಭಾಗವಾರು ಅರ್ಹ ವಿದ್ಯಾರ್ಥಿಗಳು ಅಡಕದಂತೆ ಪರೀಕ್ಷೆ ನಡೆಯುವ ದಿನದಂದು ಕುಲಸಚಿವರು ಆಡಳಿತ ಕಛೇರಿಯಲ್ಲಿ ಪ್ರವೇಶ ಪತ್ರ ಪಡೆದುಕೊಳ್ಳುವಂತೆ ಈ ಮೂಲಕ ತಿಳಿಸಿದೆ.

**ಸೂಚನೆಗಳು:**

1. ಪಿಎಚ್.ಡಿ ಲಿಖಿತ ಪ್ರವೇಶ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಿಗೆ ಯಾವುದೇ ತರಹದ ಟಿಎ/ಡಿಎ/ವಸತಿ ನೀಡಲಾಗುವುದಿಲ್ಲ.
2. ಪ್ರವೇಶಾತಿಗೆ ತಾವು ಸಲ್ಲಿಸಿರುವ ನಕಲು ದಾಖಲಾತಿಗಳ ಅನ್ವಯ ಪಿಎಚ್.ಡಿ ಪ್ರವೇಶ ಪರೀಕ್ಷೆಗೆ ಅರ್ಹೈಸಲಾಗಿದೆ. ತದನಂತರದಲ್ಲಿ ತಮ್ಮ ಮೂಲ ದಾಖಲಾತಿಗಳಲ್ಲಿ ಏನಾದರೂ ದೋಷ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳ ಅಭ್ಯರ್ಥಿತನವನ್ನು ನಿಷ್ಕ್ರಿಯಗೊಳಿಸಿ ರದ್ದುಗೊಳಿಸಲಾಗುವುದು.
3. ಪರೀಕ್ಷೆಗೆ ಗೈರಾದ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಮರು ಪರೀಕ್ಷೆ ನಡೆಸಲು ಅವಕಾಶವಿರುವುದಿಲ್ಲ. ಗೈರನ್ನು ಪರಿಗಣಿಸಿ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು.
4. ಯಾವುದೇ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.

ಅಡಕ: 1. ಕಜಾವಿವಿ ಕುಲಸಚಿವರು ಆಡಳಿತ ಅನುಮತಿಸಿದ ವಿಭಾಗವಾರು ಅರ್ಹ ವಿದ್ಯಾರ್ಥಿಗಳ ಪಟ್ಟಿ

ಕುಲಸಚಿವರು (ಮೌಲ್ಯಮಾಪನ)
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

Scanned with OKEN Scanner